ಶಿಕ್ಷಕರ ಹುದ್ದೆಗಳನ್ನು ಹರಾಜು ಹಾಕುವಂಥ ಪ್ರಕ್ರಿಯೆ ನಡೆಯುತ್ತಿದೆ. ಇಲ್ಲವೆಂದರೆ, ನೀವು grant ಕೊಡಲಿಕ್ಕೆ ಹೋಗಬೇಡಿ. ಅದನ್ನು ಮುಚ್ಚುವ ವ್ಯವಸ್ಥೆ ಮಾಡಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ : Grant ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಪ್ರಸ್ತಾವನೆಗಳು ಬಂದಿಲ್ಲ. ಅವರಿಗೆ grant-in-aid ಕೇಳುವುದಕ್ಕೆ ಅರ್ಹತೆ ಇದೆ. ಆದರೆ, ಆ ಪ್ರಸ್ತಾವನೆ ನಮ್ಮ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಅವರು ಅಲ್ಲಿ ಸ್ಥಿತಿಯನ್ನು ಸುಧಾರಿಸಿಕೊಳ್ಳದೇ ಹೋದರೆ, ಗುಣಮಟ್ಟದ ಶಿಕ್ಷಣವನ್ನು ಕೊಡುವಂಥ ಸ್ಥಿತಿಯನ್ನು ನಿರ್ಮಿಸಿಕೊಳ್ಳದಿದ್ದರೆ, ಕಟ್ಟಡಗಳು, ಉಳಿದೆಲ್ಲ ಸೌಲಭ್ಯಗಳು, ಶಿಕ್ಷಕರು, ಇತ್ಯಾದಿಗಳನ್ನು ಚೆನ್ನಾಗಿ ಮಾಡಿಕೊಳ್ಳದಿದ್ದರೆ ಅದು ನಮ್ಮ ಜಿಲ್ಲೆಯ High school ಹೌದು, ಅ ಹಿನ್ನೆಲೆಯಲ್ಲಿಯೂ ಸಹ ಶಿಕ್ಷಣ ಸಚಿವನಾಗಿ ನಿಶ್ಚಿತವಾಗಿ ನಾನು ನಮ್ಮ ಎನ್‌ಜೆಡಿ ಪ್ರೌಢಶಾಲೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದ ಕ್ರಮ ತೆಗೆದುಕೊಳ್ಳತ್ತೇನೆ. ಕೇವಲ grant-in-aid ಗೆ ಒಳಪಡಿಸುವುದಕ್ಕೋಸ್ಕರವಾಗಿ ಸಂಸ್ಥೆ ನಡೆಸಿ, ಶಿಕ್ಷಕರಿಗೆ ತೊಂದರೆ ಕೊಡುವುದಕ್ಕೆ ಮುಂದಾದರೆ ನಾವು ಅಗತ್ಯ ಎಚ್ಚರಿಕೆಯನ್ನು ಆ ಸಂಸ್ಥೆಗೆ ನೀಡುತ್ತೇವೆ.

ಕುಡಿಯುವ ನೀರಿನ ಅಭಾವದ ಬಗ್ಗೆ

120 (870) ಶ್ರೀ ರಾಮಚಂದ್ರ ಎಸ್.ವಿ. (ಜಗಳೂರು) :–ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಗಳೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ; ಇದಕ್ಕಾಗಿ ಎಂದು ಹಣ ಬಿಡುಗಡೆ ಮಾಡಲಾಗುವುದು; (ವಿವರ ನೀಡುವುದು)?

a) Has it come to the notice of Government that, there is drinking water scarcity in the jurisdiction of Jagalur Constituency;

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :–

ಅ) ಬಂದಿದೆ.

ಆ) ಕೇಂದ್ರ ಸರ್ಕಾರದ ಪುನರ್ರಚಿತ ಮಾರ್ಗದರ್ಶಿಗಳ ಪ್ರಕಾರ ಗಣಕೀಕರಣ

(IMS) ಅಂತರ್ಜಾಲದಡಿ ಜಿಲ್ಲಾ ಪಂಚಾಯತಿ ದಾಖಲಿಸಿರುವ ಮಾಹಿತಿಯನ್ವಯ ಜಗಳೂರು ಕ್ಷೇತ್ರದ ವ್ಯಾಪ್ತಿಯ 72 ಜನವಸತಿಗಳಲ್ಲಿ ನೀರು ಪೂರೈಕೆ ವ್ಯವಸ್ಥೆ ಕಡಿಮೆಯಿದೆ. ಅವುಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಉತ್ತಮಪಡಿಸಲು ಪ್ರಸಕ್ತ ಸಾಲಿನಲ್ಲಿ ಜಗಳೂರು ತಾಲ್ಲೂಕಿನಲ್ಲಿ ವಿವಿಧ ಕುಡಿಯುವ ನೀರಿನ ಬಾಬ್ತಿಗೆ ಲಭ್ಯವಿರುವ ರೂ. 97.40 ಲಕ್ಷಗಳ ವತಿಯಿಂದ ಜಿಲ್ಲಾ ಪಂಚಾಯತಿ ಅಗತ್ಯವಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಇದಲ್ಲದೆ, ತುರ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಸ್ಥಳೀಯ ಅವಶ್ಯಕತೆ ಆಧರಿಸಿ ಅಗತ್ಯ ಕಾಮಗಾರಿ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳು ಕ್ರಮ ವಹಿಸಬಹುದಾಗಿದೆ. ಅನುಮೋದಿತ ಕಾಮಗಾರಿಗಳಿಗೆ ಪ್ರಗತಿ ಆಧರಿಸಿ ಕಾಲಕಾಲಿಕ ಅನುದಾನ ಬಿಡುಗಡೆಯಾಗುತ್ತದೆ.

a) Yes.

ಶ್ರೀ ಎಸ್.ವಿ. ರಾಮಚಂದ್ರ : ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ ಆ ಉತ್ತರ ಸಮಾಧಾನಕರವಾಗಿಲ್ಲ. ನನ್ನ ಜಗಳೂರು ವಿಧಾನಸಭಾ ಕ್ಷೇತ್ರ ಅತ್ಯಂತ ಹಿಂದುಳಿದ ಪ್ರದೇಶ. ಬಹಳ ದಿನಗಳಿಂದ ಅಲ್ಲಿ ಕುಡಿಯುವ ನೀರಿನ ಸಮಸ್ಯ ಇದ್ದೇ ಇದೆ. ಸುಮಾರು 100 ವರ್ಷಗಳ ಇತಿಹಾಸದಲ್ಲಿ 70 ವರ್ಷ ನನ್ನ ವಿಧಾನ ಸಭಾ ಕ್ಷೇತ್ರ ಬರಗಾಲ ಕಂಡಿದೆ. ಆದ್ದರಿಂದ, ಈ ಪ್ರದೇಶದಲ್ಲಿ ಯಾವುದೇ ಜಲಮೂಲ, ಜೀವ ನದಿ ಯಾವುದೂ ಇಲ್ಲ. ಅಂತರಜಲದಲ್ಲಿಯೇ ಕುಡಿಯುವ ನೀರಿನ ಉಪಯೋಗ ಕಾಣುತ್ತಿದ್ದೇವೆ. ಅಲ್ಲಿ ಮುಕ್ಕಾಲು ಪಾಲು ಕೊಳವೆ ಬಾವಿಗಳಲ್ಲಿ fluoride ಅಂಶವಿದೆ. ಆದ್ದರಿಂದ ಅಲ್ಲಿ ಕುಡಿಯುವ ನಿರಿನ ಸಮಸ್ಯೆ ತೀವ್ರವಾಗಿದೆ. ಅದಲ್ಲದೆ, ಶೋಭಾ ಕರಂದ್ಲಾಜೆಯವರು ಮಂತ್ರಿಯಾಗಿದ್ದಾಗ ಸಂತೆ ಮುದ್ದಾಪುರ ಮತ್ತು ಸುತ್ತಮುತ್ತಲ 107 ಗ್ರಾಮಗಳಿಗೆ ರಾಜೀವ್ ಗಾಂಧಿ ಸಬ್ ಮಿಷನ್‌ನಲ್ಲಿ 63 ಕೋಟಿ ರೂಪಾಯಿಗಳ ಕಾಮಗಾರಿಗೆ ಅನುಮೋದನೆ ಕೊಡಿಸಿದ್ದರು. ಆದರೆ, ಅದು ಇಲ್ಲಿಯವರೆಗೆ ಕಾರ್ಯರೂಪಕ್ಕೆ ಬಂದಿಲ್ಲ. ದಿನಾಂಕ : 27-11-2008ರಲ್ಲಿ ಆಗಿತ್ತು. ಆದರೆ, ಅದೇ ದಿನ ಅನುಮೋದನೆಗೊಂಡ ಹರಪನಹಳ್ಳಿ ಕಾಮಗಾರಿಯನ್ನು ದಿನಾಂಕ : 15-2-2009ರಲ್ಲಿ ಪ್ರಾರಂಭಿಸಿದ್ದಾರೆ, ಶಂಕುಸ್ಥಾಪನೆಯಾಗಿದೆ. ಇದುವರೆಗೂ ಅದರ ಬಗ್ಗೆ ರೂಪುರೇಷೆ ಇಲ್ಲ. ಅದು ಏನಾಗಿದೆ ಎಂದೂ ಗೊತ್ತಿಲ್ಲ,. ಕೆಲಸ ಸಹ ಪ್ರಾರಂಭವಾಗಿಲ್ಲ.

ಅಧ್ಯಕ್ಷರು : ಉಪ ಪ್ರಶ್ನೆ ಕೇಳಬೇಕಷ್ಟೇ. ನೀವು ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ. ಬೇರೆ ವಿಷಯದ ಮೇಲೆ ಚರ್ಚೆ ಮಾಡುವಾಗ ಇದನ್ನು ಕೇಳಿ. ಅದು ಬಿಟ್ಟು ನೀವು ಪ್ರಶ್ನೆ ಕೇಳಿ ಎಲ್ಲವನ್ನೂ ಹೇಳುತ್ತಾ ಕುಳಿತರೆ ಹೇಗೆ? No. ಅವರು ಉತ್ತರ ಹೇಳಲಿ. ರುದ್ರೇಶ್

ಗೌಡರವರೆ, ಕುಳಿತುಕೊಳ್ಳಿ. ನೀವು ಅನುಮತಿ ಇಲ್ಲದೆ ಪ್ರಶ್ನೆ ಕೇಳುವ ಹಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ರುದ್ರೇಶ್ ಗೌಡರವರೆ, ಇದು ಜಗಳೂರಿಗೆ ಸಂಬಂಧಪಟ್ಟ ಪಶ್ನೆ.

ಅಧ್ಯಕ್ಷರು : ರುದ್ರೇಶ್ ಗೌಡರವರೆ, ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ. ನೀವು ಪ್ರತಿ ಸಲ ಎದ್ದು ನಿಲ್ಲುತ್ತೀರಿ. ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ಇದು ಜಗಳೂರಿಗೆ ಸಂಬಂಧಪಟ್ಟಿರುವ ಪ್ರಶ್ನೆ ಅದಕ್ಕೆ ಉತ್ತರಿಸುತ್ತಿದ್ದೇನೆ. ನೀವು ಬೇರೆ ಕೇಳಿ ಉತ್ತರ ಕೊಡುತ್ತೇನೆ. ಮಾನ್ಯ ರಾಮಚಂದ್ರಪ್ಪರವರು ಏನು ಪ್ರಶ್ನೆ ಕೇಳಿದ್ದಾರೆ. ಅವರು ಜಗಳೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕುಡಿಯುವ ನೀರಿನ ಯೋಜನೆಗೆ ಇನ್ನೂ ಚಾಲನೆ ಸಿಕ್ಕಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಈಗಾಗಲೇ ಉತ್ತರ ಕೊಟಿದ್ದೇನೆ. 97.40 ಲಕ್ಷಗಳಿಗೆ ತಕ್ಷಣವೇ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತು ಅದರ ಬಗ್ಗೆ ನಾನು ಉತ್ತರ ಕೊಟ್ಟಿದ್ದೇನೆ. ಅವರು ಈಗ 106 ಹಳ್ಳಿಗಳಿಗೆ ಕೇಂದ್ರ ಪುರಸ್ಕೃತ ಸಬ್ ಮಿಷನ್ ಯೋಜನೆಯಡಿಯಲ್ಲಿ ಜಗಳೂರು ತಾಲ್ಲೂಕಿನ ಸಂತೇಮುದ್ದಾಪುರ ಹಾಗೂ ಇತರೆ 106 ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ 61 ಕೋಟಿ 50 ಲಕ್ಷದ ಅಂದಾಜು ಯೋಜನೆಗೆ ಮಂಜೂರಾಗಿದೆ. ನಮ್ಮ SLEC ಸಭೆಯೊಳಗೆ ದಿನಾಂಕ 27–11–2008 ರಂದು ಮಂಜೂರಾಗಿದೆ. ಇದರ ಬಗ್ಗೆ ನೀವು ಏನು ಹೇಳಿದಿರಿ ಅದು ಸರಿಯಾದ ಮಾಹಿತಿಯಿದೆ. ಅದಕ್ಕೆ ಈಗಲೇ ಪ್ರಸಕ್ತ ಸಾಲಿನಲ್ಲಿ administration approval ಕೊಟ್ಟಿದೇವೆ. ಆದಷ್ಟು ಬೇಗನೆ ಈ ಯೋಜನೆಯ ಮುಖಾಂತರ 106 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತರಬೇಕು. ಈ ವರ್ಷ ನಾವು ಜಾರಿಗೆ ತರುತ್ತೇವೆ, ಇದರಲ್ಲಿ ಏನೂ ತಡವಾಗುವುದಿಲ್ಲ. ಹೀಗಾಗಿ definite ಆಗಿ ತರುತ್ತೇವೆ.

ಅಧ್ಯಕ್ಷರು : ಈಗ ಲಿಲಖಿತ ಮೂಲಕ ಪ್ರಶ್ನೆಗಳನ್ನು ಮಂಡಿಸುವುದು.

ಶ್ರೀ ಎನ್. ಸಂಪಂಗಿ : ನನ್ನದೊಂದು ಪ್ರಶ್ನೆಯಿದೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ನಾನು ಕರೆದಾಗ ನೀವು ಇರಲಿಲ್ಲ. ನಿನ್ನೆಯೂ ಕೂಡ ತಾವು ಹೀಗೆ ಮಾಡಿದಿರಿ. ಅವಕಾಶವಿಲ್ಲ. ತಾವು ಕೇಳಿಬಿಡಿ.

ಶ್ರೀ ಎನ್. ಸಂಪಂಗಿ : ಅದಕ್ಕೋಸ್ಕರವೇ ನಾನು ಬಂದಿದ್ದೇನೆ. ದಯವಿಟ್ಟು ಅವಕಾಶ ಕೊಡಿ. ಟ್ರಾಫಿಕ್ ಇದೆ. ನನಗೆ ಅವಕಾಶ ಸಿಗುವುದೇ ಅಪರೂಪ, ಅಂಥದ್ದರಲ್ಲಿ ನೀವು ಕೊಡಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ನಾವು ಏನು ಮಾಡುವುದು? ನಿನ್ನೆಯೂ ನಾನು ಕರೆದೆ. ಇವತ್ತು ಕರೆದೆ,